

ತೊಳೆದು ಭಗವಂತನ ಕೃಪೆ ಸಿಗುತ್ತೆ ಎನ್ನುವ ನಂಬಿಕೆ ನಮ್ಮದು. ಏನ್ ಮಾಡೋದು, ಹೃಷಿಕೇಶಕ್ಕೆ ಬಂದ್ವಿ. ಮಳೆ ಶುರುವಾಯ್ತು. ಕೇದಾರನಾಥಕ್ಕೂ ಹೋಗಲಿಲ್ಲ. ಎಲ್ಲೂ ಹೋಗಾಕೆ ಆಗ್ಲಿಲ್ಲ. ಭಗವಂತನಿಗೆ ನಮಗೆ ದರ್ಶನ ಕೊಡಕ್ಕೆ ಇಷ್ಟ ಇಲ್ಲ ಅನ್ಸತ್ತೆ. ಭಗವಂತನ ಕೃಪೆಗೆ ಬಂದಿರುವಾಗ ಸರ್ಕಾರದ ಹಣ ಯಾಕೆ? ನಮಗೆ ಬೇಡ. ನಾವು ಆಗ್ಲೆ ರಿಟರ್ನ್ ಟಿಕೆಟ್ ಮಾಡಿದ್ದೀವಿ. ಹೋಗ್ತೀವಿ ಬಿಡಿ' ಎಂದು ಅಪ್ಪಟ ರೈತನ ಸ್ವಾಭಿಮಾನ ಮತ್ತು ಪ್ರಾಮಾಣಿಕತೆಯಿಂದ ಹೇಳಿದರು. ನಾನು ಸುಲಭವಾಗಿ ಸೋಲೊಪ್ಪಿಕೊಳ್ಳಲು ಸಿದ್ಧನಿರಲಿಲ್ಲ. ನನ್ನ ಮನಸ್ಸು ಮತ್ತೆ ನೆರವಿಗೆ ಪ್ರಯತ್ನಿಸಲು ಪ್ರೇರೇಪಿಸಿತು.

'ಟ್ರೈನ್ ಟಿಕೆಟ್ ಆದ್ರೂ ತಗೊಳ್ಳಿ' ಅಂದೆ. ಮುಖ ಸಿಂಡರಿಸಿಕೊಂಡ ಶಿವಪ್ಪ 'ನಮ್ಮ ಅಪ್ಪ ಅವ್ವಂದಿರ ಕಾಲದಲ್ಲಿ ಭಾರೀ ಬಡತನ ಇತ್ತು. ಹಬ್ಬ ಹರಿದಿನಗಳಲ್ಲಿ ಮಾತ್ರ ಅನ್ನ ಮಾಡ್ತಿದ್ರು. ಸಕ್ಕರೆ ಅನ್ನೋದು ವೈಭೋಗದ ವಸ್ತು. ಸ್ಕೂಲ್ ಇರಲಿಲ್ಲ. ನಾವೆಲ್ಲ ಸ್ಕೂಲ್ಗೆ ಹೋಗಿಲ್ಲ. ಆದರೆ, ಈಗ ಪರಿಸ್ಥಿತಿ ಬಹಳ ಸುಧಾರಿಸಿದೆ. ದುಡಿದು ಬದುಕೋರಿಗೆ ಅವಕಾಶ ಇದೆ. ಹಸಿವಿನ ಹಪಹಪಿ ಕಡಿಮೆಯಾಗಿದೆ. ಮನುಷ್ಯ ಈ ಭೂಮಿ ಮೇಲೆ ಹುಟ್ಟಿದ ಮೇಲೆ ಇದೇ ಸುಭಿಕ್ಷ ಕಾಲ ಅನ್ಸತ್ತೆ. ಶ್ರೀಮಂತ ಬಡವ ಎಲ್ರೂ ಬದುಕಬಹುದು. ಹೊಟ್ಟೆ ಬಟ್ಟೆಗೆ ಏನಾದ್ರೂ ಕೆಲಸ ಸಿಗುತ್ತೆ. ನಮಗೆ ಅವ ಎಲ್ಲಾ ಕೆಲಸ ಕೊಟ್ಟಿದ್ದಾನೆ. ನಿಮ್ಮ ಹಣ ನಮಗೆ ಬೇಡ. ನಮ್ಮನ್ನು ಹುಡುಕಿಕೊಂಡು ಬಂದು ಮಾತಾಡ್ಸಿದ್ರಲ್ಲ, ಖುಷಿಯಾಯಿತು. ಸಾಕು ಬಿಡಿ' ಎಂದು ಕೈ ಮುಗಿದರು. ಎಂಥಾ ಧರ್ಮವಂತ ಅನ್ನಿಸಿತು. ಧರ್ಮದ ಬಗ್ಗೆ ಭಾಷಣ ಮಾಡುವ ಸನ್ಯಾಸಿಗಳಿಗೂ, ಧರ್ಮವಂತರಂತೆ ಬದುಕುವ ಸಾಮಾನ್ಯರಿಗೂ ಎಷ್ಟೊಂದು ವ್ಯತ್ಯಾಸ ಎಂದು ನನಗೇ ನಾನು ಗುನುಗಿಕೊಂಡೆ. ಆಶ್ರಮದಿಂದ ಹೊರಟು ಗಂಗಾ ನದಿಯತ್ತ ಹೆಜ್ಜೆ ಹಾಕುತ್ತಾ ಶಿವಪ್ಪ ಮಾತು ಮುಂದುವರೆಸಿದರು. 'ನಮ್ಮ ಹಳ್ಳಿಯಲ್ಲಿ ಬಡತನವಿದ್ದರೂ ಹಿಂದಿನಿಂದಲೂ ಮಠಗಳಿಗೆ